| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | (17)91 |
| ಸದಸ್ಯರ ಹೆಸರು: | ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 08.12.2025 |
| ಉತ್ತರಿಸುವವರು: | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಅರಣ್ಯ ಮತ್ತು ಗೋಮಾಳ/ಕಂದಾಯ ಇಲಾಖೆ ಜಾಗಗಳು ಒಂದೇ ಸರ್ವೆ ನಂಬರ್ ನಲ್ಲಿ ಒಟ್ಟಿಗೆ ಇರುವ ಪ್ರಕರಣಗಳಲ್ಲಿ ಜಂಟಿ ಸರ್ವೆ ಮಾಡಿ ಅರಣ್ಯ ಹಾಗೂ ಗೋಮಾಳ/ಕಂದಾಯ ಇಲಾಖೆ ಜಾಗಗಳನ್ನು ಪ್ರತ್ಯೇಕಿಸಿ ಪಹಣಿಯಲ್ಲಿ ನಮೂದಿಸ ಬೇಕಾಗಿರುವ ಕಾರ್ಯ ಆಗದಿರುವುದರಿಂದ ರೈತರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಎಷ್ಟು ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಂಡಿಲ್ಲ; (ಜಿಲ್ಲಾವಾರು ಪ್ರಗತಿಯ ವಿವರ ನೀಡುವುದು) | ಅಧಿಸೂಚಿತ ಅರಣ್ಯ ಪ್ರದೇಶಗಳು (ಮೀಸಲು ಅರಣ್ಯ/ ರಕ್ಷಿತ ಅರಣ್ಯ/ ಕಿರು ಅರಣ್ಯ) ಮತ್ತು ಗೋಮಾಳ ಪ್ರದೇಶಗಳಲ್ಲಿ ಒಂದೇ ಸರ್ವೆ ನಂಬರ್‌ಗಳು ಇರುವ ಕೆಲವೊಂದು ಗೊಂದಲಮಯ ಪ್ರಕರಣಗಳಲ್ಲಿ ಸರ್ವೆ ನಂಬರ್‌ನಲ್ಲಿನ ಅರಣ್ಯ ಗಡಿ ಗುರುತಿಸಲು ಕಂದಾಯ ಇಲಾಖೆಯೊಂದಿಗೆ ಜಂಟಿ ಸರ್ವೆ ಮಾಡಲಾಗುವುದು.<br>ವಿಶೇಷವಾಗಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ 957 ಪ್ರಕರಣಗಳು ಜಂಟಿ ಸರ್ವೆಗೆ ಸ್ವೀಕೃತವಾಗಿದ್ದು, ಅವುಗಳಲ್ಲಿ 107 ಪ್ರಕರಣಗಳ ಅರಣ್ಯ ಹಾಗೂ ಗೋಮಾಳ ಜಂಟಿ ಸರ್ವೆ ನಡೆಸಲಾಗಿರುತ್ತದೆ.<br>ಉಳಿದಂತಹ ಜಿಲ್ಲೆಗಳಲ್ಲಿ, ಅಗತ್ಯವಿದ್ದಲ್ಲಿ, ಯಾರಿಂದಾದರೂ ಜಂಟಿ ಸರ್ವೆ ಕಾರ್ಯಕ್ಕಾಗಿ ಅರ್ಜಿ ಸ್ವೀಕೃತವಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ಆದ್ಯತೆ ಮೇರೆಗೆ ಕಂದಾಯ ಇಲಾಖೆಯೊಂದಿಗೆ ಜಂಟಿ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗುವುದು ಹಾಗೂ ಅಂತಹ ಪ್ರಕರಣಗಳಲ್ಲಿ ಗೋಮಾಳ/ ಕಂದಾಯ ಇಲಾಖೆ ಜಾಗಗಳನ್ನು ಪ್ರತ್ಯೇಕಿಸಿ ಪಹಣಿಯಲ್ಲಿ ಮತ್ತು ಭೂಮಾಪನ ದಾಖಲೆಗಳಲ್ಲಿ ಅರಣ್ಯವೆಂದು ನಮೂದಿಸುವ ಪ್ರಕ್ರಿಯೆ ಕಂದಾಯ ಇಲಾಖೆ ವತಿಯಿಂದ ಕೈಗೊಳ್ಳಬೇಕಾಗಿರುತ್ತದೆ.<br>ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ :1164/2023 ಗೆ ಸಂಬಂಧಿಸಿದಂತೆ, ದಿನಾಂಕ: 04.03.2025ರ ಆದೇಶದಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅರಣ್ಯಗಳೆಂದು ಅಧಿಸೂಚಿಸಲಾಗಿರುವ ಪ್ರದೇಶಗಳು, ಸರ್ಕಾರಿ ದಾಖಲಾತಿಗಳಲ್ಲಿ **"ಅರಣ್ಯ"ವೆಂದು** ದಾಖಲಾಗಿರುವ ಪ್ರದೇಶಗಳು, ಅರಣ್ಯದಂತಹ ಸ್ವರೂಪವಿರುವ ಪ್ರದೇಶಗಳ ಕ್ರೂಢೀಕೃತ ದಾಖಲೆಗಳನ್ನು (Consolidated Record of Forest Lands) ಸಿದ್ಧಪಡಿಸಲು ನಿರ್ದೇಶಿಸಿರುತ್ತದೆ. ಕ್ರೂಢೀಕೃತ ಅರಣ್ಯ ಪ್ರದೇಶಗಳ ಮಾಹಿತಿಯನ್ನು ಸಿದ್ಧಪಡಿಸಲು ರಾಜ್ಯ ಸರ್ಕಾರವು ದಿನಾಂಕ: 06.03.2025 ರಂದು ಜಿಲ್ಲಾ ಮಟ್ಟದ ಸಮಿತಿ (ಅಧ್ಯಕ್ಷರು - ಜಿಲ್ಲಾಧಿಕಾರಿ), ಕಂದಾಯ-ವಿಭಾಗೀಯ ಮಟ್ಟದ ಸಮಿತಿ (ಅಧ್ಯಕ್ಷರು - ಪ್ರಾದೇಶಿಕ ಆಯುಕ್ತರು) ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು (ಅಧ್ಯಕ್ಷರು-ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, |

| | | |
|---|---|---|
| | | ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ) ರಚಿಸಿರುತ್ತದೆ.<br>ಪ್ರಸ್ತುತ ಅರಣ್ಯದ ಸ್ವರೂಪವಿರುವ ಪ್ರದೇಶಗಳ (Forest like areas) {ಈ ಹಿಂದೆ ಪರಿಭಾವಿತ ಅರಣ್ಯ (Deemed Forest)} ಕ್ರೂಢೀಕೃತ ದಾಖಲೆಗಳನ್ನು ಸಿದ್ಧಪಡಿಸಲು ಜಂಟಿ ಸರ್ವೆ ಕಾರ್ಯವು ಪ್ರಗತಿಯಲ್ಲಿರುತ್ತದೆ. ಜಿಲ್ಲಾವಾರು ಪ್ರಗತಿಯ ವಿವರ **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ | ಕಳೆದ 3 ವರ್ಷದಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಸರ್ವೆ ನಂಬರ್‌ಗಳಲ್ಲಿ ಜಂಟಿ ಸರ್ವೆ ಕಾರ್ಯ ಪೂರ್ಣಗೊಂಡಿದೆ; ಎಷ್ಟು ಸರ್ವೆ ನಂಬರ್ ಗಳಲ್ಲಿ ಅರಣ್ಯ ಹಾಗೂ ಗೋಮಾಳ/ಕಂದಾಯ ಇಲಾಖೆ ಭೂಮಿಯೆಂದು ಪ್ರತ್ಯೇಕವಾಗಿ ಪಹಣಿಯಲ್ಲಿ ನಮೂದಿಸುವ ಕಾರ್ಯವಾಗಿದೆ: ಜಂಟಿ ಸರ್ವೆ ಮಾಡಲು ಎಷ್ಟು ಪ್ರಕರಣಗಳು ಬಾಕಿ ಇವೆ: (ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ 957 ಪ್ರಕರಣಗಳು ಜಂಟಿ ಸರ್ವೆಗೆ ಸ್ವೀಕೃತವಾಗಿದ್ದು, ಅವುಗಳಲ್ಲಿ 107 ಪ್ರಕರಣಗಳ ಅರಣ್ಯ ಹಾಗೂ ಗೋಮಾಳ ಜಂಟಿ ಸರ್ವೆ ನಡೆಸಲಾಗಿರುತ್ತದೆ. ತಾಲ್ಲೂಕುವಾರು ಮಾಹಿತಿ **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ | ಜಂಟಿ ಸರ್ವೆ ಕಾರ್ಯ ಬಾಕಿ ಇರಲು ಕಾರಣಗಳೇನು; ಜಂಟಿ ಸರ್ವೆ ಕಾರ್ಯವನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಜಂಟಿ ಸರ್ವೆ ಕಾರ್ಯವನ್ನು ಅತಿ ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು |

**ಸಂಖ್ಯೆ: ಅಪಜೀ 108 ಎಫ್‌ಎಎಫ್ 2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ-1

ಅನುಬಂಧ-1

| ಕ್ರಮ ಸಂ. | ಜಿಲ್ಲೆ | ಸರ್ಕಾರದ ಆದೇಶ ದಿನಾಂಕ: 05.05.2022 ರಂತೆ ಪರಿಭಾವಿತ ಅರಣ್ಯ ಪ್ರದೇಶಗಳ ಸಂಖ್ಯೆ | ಜಂಟಿ ಸರ್ವೆ ಕಾರ್ಯ ನಡೆದಿರುವ ಪ್ರದೇಶಗಳ ಸಂಖ್ಯೆ | ಜಂಟಿ ಸರ್ವೆ ಕಾರ್ಯ ಪ್ರಗತಿಯಲ್ಲಿರುವ ಪ್ರದೇಶಗಳ ಸಂಖ್ಯೆ |
|---|---|---|---|---|
| 1 | ಮೈಸೂರು | 171 | 121 | 50 |
| 2 | ಮಂಡ್ಯ | 754 | 122 | 632 |
| 3 | ಉತ್ತರ ಕನ್ನಡ | 1834 | 70 | 1764 |
| 4 | ಧಾರವಾಡ | 25 | 25 | 0 |
| 5 | ಗದಗ | 16 | 0 | 16 |
| 6 | ಹಾವೇರಿ | 142 | 142 | 0 |
| 7 | ಬಳ್ಳಾರಿ | 836 | 0 | 836 |
| 8 | ಕೊಪ್ಪಳ | 225 | 0 | 0 |
| 9 | ವಿಜಯನಗರ | 204 | 134 | 70 |
| 10 | ಚಿತ್ರದುರ್ಗ | 164 | 148 | 16 |
| 11 | ದಾವಣಗೆರೆ | 36 | 0 | 36 |
| 12 | ಚಿಕ್ಕಮಗಳೂರು | 1405 | 5 | 1400 |
| 13 | ಬೆಳಗಾವಿ | 534 | 303 | 231 |
| 14 | ಬಾಗಲಕೋಟೆ | 6 | 6 | 0 |
| 15 | ವಿಜಯಪುರ | 43 | 18 | 25 |
| 16 | ಚಾಮರಾಜನಗರ | 56 | 0 | 56 |
| 17 | ದಕ್ಷಿಣ ಕನ್ನಡ | 1320 | 244 | 1076 |
| 18 | ಉಡುಪಿ | 1234 | 40 | 1194 |
| 19 | ಶಿವಮೊಗ್ಗ | 1570 | 0 | 1570 |
| 20 | ಬೀದರ್ | 892 | 819 | 73 |
| 21 | ರಾಯಚೂರು | 184 | 0 | 184 |
| 22 | ಯಾದಗಿರಿ | 31 | 0 | 31 |
| 23 | ಕಲಬುರ್ಗಿ | 288 | 0 | 0 |
| 24 | ಹಾಸನ | 358 | 207 | 151 |
| 25 | ತುಮಕೂರು | 722 | 475 | 247 |
| 26 | ಬೆಂಗಳೂರು ನಗರ | 48 | 17 | 31 |
| 27 | ಬೆಂಗಳೂರು ಗ್ರಾಮಾಂತರ | 185 | 3 | 182 |
| 28 | ಕೋಲಾರ | 101 | 64 | 37 |
| 29 | ಬೆಂಗಳೂರು (ದಕ್ಷಿಣ) | 91 | 91 | 0 |
| 30 | ಚಿಕ್ಕಬಳ್ಳಾಪುರ | 311 | 190 | 121 |
| 31 | ಕೊಡಗು | 210 | 66 | 144 |
| | ಒಟ್ಟು | **13996** | **3310** | **10173** |

ಅನುಬಂಧ-02

**ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರ ಕಛೇರಿ ಚಿಕ್ಕಮಗಳೂರು ಜಿಲ್ಲೆ , ಚಿಕ್ಕಮಗಳೂರು**

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: ಎಲ್ ಸಿ ಕ್ಯೂ:17:157 ನೇ ಅ/2025, ದಿನಾಂಕ:19.11.2025 ಕ್ಕೆ ಉತ್ತರಿಸುವ ಬಗ್ಗೆ.**

| | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ ಟಿ ರವಿ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಪ್ರಶ್ನೆ (17) 19 ಕ್ಕೆ ಉತ್ತರಿಸುವ ಬಗ್ಗೆ. | |
|---|---|---|
| ಕ್ರ ಸಂ | ಪ್ರಶ್ನೆ | ಉತ್ತರ |
| ಅ) | ಅರಣ್ಯ ಮತ್ತು ಗೋಮಾಳ/ಕಂದಾಯ ಇಲಾಖೆ ಜಾಗಗಳು ಒಂದೇ ಸರ್ವೆ ನಂಬರ್ ನಲ್ಲಿ ಒಟ್ಟಿಗೇ ಇರುವ ಪ್ರಕರಣಗಳಲ್ಲಿ ಜಂಟಿ ಸರ್ವೆ ಮಾಡಿ ಅರಣ್ಯ ಹಾಗೂ ಗೋಮಾಳ/ ಕಂದಾಯ ಇಲಾಖೆ ಜಾಗಗಳನ್ನು ಪ್ರತ್ಯೇಕಿಸಿ ಪಹಣಿಯಲ್ಲಿ ನಮೂದಿಸಬೇಕಾಗಿರುವ ಕಾರ್ಯ ಆಗದೆ ಇರುವುದರಿಂದ ರೈತರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಂಡಿಲ್ಲ . (ಜಿಲ್ಲಾವಾರು ಪ್ರಗತಿಯ ವಿವರ ನೀಡುವುದು) | ಅರಣ್ಯ ಮತ್ತು ಗೋಮಾಳ/ಕಂದಾಯ ಇಲಾಖೆ ಜಾಗಗಳು ಒಂದೇ ಸರ್ವೆ ನಂಬರ್ ನಲ್ಲಿ ಒಟ್ಟಿಗೇ ಇರುವ ಪ್ರಕರಣಗಳಲ್ಲಿ ಜಂಟಿ ಸರ್ವೆ ಮಾಡಿ ಅರಣ್ಯ ಹಾಗೂ ಗೋಮಾಳ/ ಕಂದಾಯ ಇಲಾಖೆ ಜಾಗಗಳನ್ನು ಪ್ರತ್ಯೇಕಿಸಿ ಪಹಣಿಯಲ್ಲಿ ನಮೂದಿಸಬೇಕಾಗಿರುವ ಕಾರ್ಯ ಆಗದೆ ಇರುವುದರಿಂದ ರೈತರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಕಳೆದ ಮೂರು ವರ್ಷದಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಸರ್ವೆ ನಂಬರ್ ಗಳಲ್ಲಿ ಜಂಟಿ ಸರ್ವೆ ಕಾರ್ಯ ಪೂರ್ಣಗೊಂಡಿದೆ; ಎಷ್ಟು ಸರ್ವೆ ನಂಬರ್ ಗಳಲ್ಲಿ ಅರಣ್ಯ ಹಾಗೂ ಗೋಮಾಳ/ ಕಂದಾಯ ಭೂಮಿಯೆಂದು ಪ್ರತ್ಯೇಕವಾಗಿ ಪಹಣಿಯಲ್ಲಿ ನಮೂದಿಸಿರುವ ಕಾರ್ಯವಾಗಿದೆ; ಜಂಟಿ ಸರ್ವೆ ಮಾಡಲು ಎಷ್ಟು ಪ್ರಕರಣಗಳು ಬಾಕಿ ಇವೆ?( ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 107 ಪ್ರಕರಣಗಳ ಅರಣ್ಯ ಹಾಗೂ ಗೋಮಾಳ ಜಂಟಿ ಸರ್ವೆ ನಡೆಸಿ ಸರ್ವೆ ವರದಿಯನ್ನು ನೀಡಲಾಗಿದೆ. ಅರಣ್ಯ ಹಾಗೂ ಗೋಮಾಳ ಜಾಗಗಳ ಜಂಟಿ ಸರ್ವೆ ಮಾಡಲು 850 ಪ್ರಕರಣಗಳು ಬಾಕಿ ಇರುತ್ತವೆ. (ತಾಲ್ಲೂಕುವಾರು ಮಾಹಿತಿ ಲಗತ್ತಿಸಿದೆ) |
| ಇ) | ಜಂಟಿ ಸರ್ವೆ ಕಾರ್ಯ ಬಾಕಿ ಇರಲು ಕಾರಣಗಳೇನು? ಜಂಟಿ ಸರ್ವೆ ಕಾರ್ಯವನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಜಂಟಿ ಸರ್ವೆ ಕಾರ್ಯವನ್ನು ಮಾಡಲು 31 ತಂಡಗಳನ್ನು ರಚಿಸಲಾಗಿರುತ್ತದೆ. |

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ
ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು
[illegible]

# ಅರಣ್ಯಗೋಮಾಳ ಅಳತೆ ವಿವರ

| ಕ್ರ. ಸಂ. | ತಾಲ್ಲೂಕು | ಗ್ರಾಮ | ಅಳತೆಯಾಗಿರುವ ಒಟ್ಟು ಸರ್ವೆ ನಂಬರ್ | ಮೂಲ ಆಕಾರಬಂದ್ ವಿಸ್ತೀರ್ಣ | | ಪ್ರಸ್ತುತ ಆಕಾರಬಂದ್ ವಿಸ್ತೀರ್ಣ | | RTC ಯಂತೆ ಗೋಮಾಳ ವಿಸ್ತೀರ್ಣ | RTC / ಅಧಿಸೂಚನೆಯಂತೆ ಅರಣ್ಯ ವಿಸ್ತೀರ್ಣ | | | ಅಳತೆಯಂತೆ ಭೌತಿಕವಾಗಿ ಅರಣ್ಯದ ವಿಸ್ತೀರ್ಣ | ಅರಣ್ಯ | | ಷರಾ |
|---|---|---|---|---|---|---|---|---|---|---|---|---|---|---|---|
| | | | | | | | | | ಅರಣ್ಯ ಅಧಿಸೂಚನೆಯಂತೆ ವಿಸ್ತೀರ್ಣ | | | | | | |
| | | | | ಎಕರೆ | ಗುಂಟೆ | ಎಕರೆ | ಗುಂಟೆ | | ಡೀಮ್ಡ್ | ಮೀಸಲು ಅರಣ್ಯ/ ಕಿರು ಅರಣ್ಯ/ಸೆಕ್ಷನ್( 4)/ RTC | ಒಟ್ಟು ಅರಣ್ಯ ವಿಸ್ತೀರ್ಣ | | ಹೆಚ್ಚು | ಕಮ್ಮಿ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | ಚಿಕ್ಕಮಗಳೂರು | 24 | 24 | 6303 | 43 | 4836 | 35.75 | 2091-19.75 | 993-21 | 1189-22 | 2183-03 | 1455-11 | 6-00 | 727-32 | ವಿವಿಧ ದಾಖಲೆಯಂತೆ ಒಟ್ಟು ಅರಣ್ಯ ವಿಸ್ತೀರ್ಣ 2183-03 ಎಕರೆ ಇದ್ದು ಅಳತೆಯಂತೆ ಭೌತಿಕವಾಗಿ 1455-11ವಿಸ್ತೀರ್ಣವಿದ್ದು ಅರಣ್ಯಕ್ಕೆ ಒಟ್ಟು -721-32 ಎಕರೆ ವಿಸ್ತೀರ್ಣ ಕಡಿಮೆ ಇರುತ್ತದೆ. |
| 2 | ಮೂಡಿಗೆರೆ | 14 | 20 | 2708 | 23 | 2067 | 29.5 | 1433-3 | 1007-16 | 190-26 | 1198-02 | 492-22 | 22-35 | 728-15 | ವಿವಿಧ ದಾಖಲೆಯಂತೆ ಒಟ್ಟು ಅರಣ್ಯ ವಿಸ್ತೀರ್ಣ 1198-02 ಎಕರೆ ಇದ್ದು ಅಳತೆಯಂತೆ ಭೌತಿಕವಾಗಿ 492-22 ವಿಸ್ತೀರ್ಣವಿದ್ದು ಅರಣ್ಯಕ್ಕೆ ಒಟ್ಟು -705-20 ಎಕರೆ ವಿಸ್ತೀರ್ಣ ಕಡಿಮೆ ಇರುತ್ತದೆ. |
| 3 | ಕಡೂರು | 22 | 43 | 1975 | 0 | 1975 | 0 | 921-38 | 580-33 | 663-20 | 1244-13 | 839-27 | 110-18 | 515-04 | ವಿವಿಧ ದಾಖಲೆಯಂತೆ ಒಟ್ಟು ಅರಣ್ಯ ವಿಸ್ತೀರ್ಣ 1244-13 ಎಕರೆ ಇದ್ದು ಅಳತೆಯಂತೆ ಭೌತಿಕವಾಗಿ 839-27 ವಿಸ್ತೀರ್ಣವಿದ್ದು ಅರಣ್ಯಕ್ಕೆ ಒಟ್ಟು 404-26 ಎಕರೆ ವಿಸ್ತೀರ್ಣ ಕಡಿಮೆ ಇರುತ್ತದೆ. |
| 4 | ಶೃಂಗೇರಿ | 5 | 10 | 2920 | 17 | 2904 | 13 | 1589-30.5 | 0 | 1940-32.5 | 1940-32.5 | 1940-32.5 | 0 | 0 | 0 |
| 5 | ಕೊಪ್ಪ | 7 | 7 | 2569 | 20 | 2386 | 26.5 | 943-21.5 | 0 | 1609-33 | 1609-33 | 1609-33 | 0 | 0 | 0 |
| 6 | ನರಾ ಪುರ | 3 | 3 | 587 | 9 | 545 | 39 | 135.31 | | 481-05 | 481-05 | 438-18 | 0 | 37-33 | ವಿವಿಧ ದಾಖಲೆಯಂತೆ ಒಟ್ಟು ಅರಣ್ಯ ವಿಸ್ತೀರ್ಣ 481-05 ಎಕರೆ ಇದ್ದು ಅಳತೆಯಂತೆ ಭೌತಿಕವಾಗಿ 438-18 ವಿಸ್ತೀರ್ಣವಿದ್ದು ಅರಣ್ಯಕ್ಕೆ ಒಟ್ಟು 37-33 ಎಕರೆ ವಿಸ್ತೀರ್ಣ ಕಡಿಮೆ ಇರುತ್ತದೆ. |
| Total | | 75 | 107 | 17064 | 32 | 14716 | 23.75 | 7113-23.75 | 2581-30 | 6075-18.5 | 8657-8.5 | 6776-23.5 | 139-13 | 2009-04 | ವಿವಿಧ ದಾಖಲೆಯಂತೆ ಒಟ್ಟು ಅರಣ್ಯ ವಿಸ್ತೀರ್ಣ 8657-8.5 ಎಕರೆ ಇದ್ದು ಅಳತೆಯಂತೆ ಭೌತಿಕವಾಗಿ 6776-23.5 ವಿಸ್ತೀರ್ಣವಿದ್ದು ಅರಣ್ಯಕ್ಕೆ ಒಟ್ಟು -1869-31 ಎಕರೆ ವಿಸ್ತೀರ್ಣ ಕಡಿಮೆ ಇರುತ್ತದೆ. |

[illegible] ಹಾಗೂ
ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು
ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಜಿಲ್ಲೆ